ಬಗ್ಗೆಯೂ ಕೂಡ ಸರ್ಕಾರದವರು ಯಾವತ್ತು ಕಾಮಗಾರಿಗಳ ಬಿಲ್ಲುಗಳಿಗೆ ಹಣವನ್ನು ಪಾವತಿ ಮಾಡುವ ಬಗ್ಗೆಯೂ ಕೂಡ ಹೇಳಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ನನಗೆ ತಿಳಿದಮಟ್ಟಿಗೆ ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಮಾಡಿದ್ದ ಹಣವನ್ನು ವಾಪಸ್ಸು ಪಡೆದುಕೊಂಡಿರುವುದಿಲ್ಲ. ಬಹುತೇಕವಾಗಿ ಯೋಜನಾಬದ್ಧವಾಗಿರತಕ್ಕಂತಹ ಕೆಲವು ಕಾಮಗಾರಿಗಳಿಗೆ ಹಣವನ್ನು ಕಡಿಮೆ ಮಾಡಿದ್ದೇವೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ್ದಿರೇನೂ ಗೊತ್ತಿಲ್ಲ. ತಾವು ನಿರ್ದಿಷ್ಟವಾದಂತಹ ಕಾಮಗಾರಿಗಳು, ಇಂತಹ ಶೀರ್ಷಿಕೆಯಡಿಯಲ್ಲಿರತಕ್ಕದ್ದನ್ನು ವಾಪಸ್ಸು ತೆಗೆದುಕೊಂಡಿದ್ದಾರೆಂದು ಬರೆದು ಕಳುಹಿಸಿದ್ದರೆ ನಾನು ನಾಳೇನೇ ತಮಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಫರ್‌ದರ್ ಕ್ಲಾರಿಫಿಕೇಷನ್‌ಗೆ ಅವಕಾಶವಿಲ್ಲ.

ಕುಂದಾಪುರ ಕ್ಷೇತ್ರದಲ್ಲಿ ಆಶ್ರಯ ಮನೆಗಳ ಕುರಿತು

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಆಶ್ರಯ ಮನೆಗಳ ಬಗ್ಗೆ ಸಭೆ ನಡೆದು ಆಶ್ರಯ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಾರೆ. ಇವತ್ತು ಮನೆಗಳನ್ನು ಕಟ್ಟತಕ್ಕಂತಹ ಸಂದರ್ಭದಲ್ಲಿ ಸನ್ಮಾನ್ಯ ವಸತಿ ಸಚಿವರು ಹೇಳಿದ್ದರು. ಆಶ್ರಯ ಸಮಿತಿ ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸುತ್ತಿಲ್ಲವೆಂದು ವಿಚಾರವನ್ನು ಹೇಳಿದರು. ಇಲ್ಲಿ ಏನಾಗಿದೆ ಎಂದರೆ ನಾವು ಆಶ್ರಯ ಸಮಿತಿಯ ಮುಖಂಡರು, ಫಲಾನುಭವಿಗಳನ್ನು ಆಯ್ಕೆ ಮಾಡಿ, ಒಂದು ತಿಂಗಳಿಗಿಂತ ಜಾಸ್ತಿಯಾಗಿದ್ದರೂ ಇನ್ನೂ ಕೂಡ ಆದೇಶವನ್ನು ಕೊಟ್ಟಿಲ್ಲ. ನಾವು ಕಾರಣವನ್ನು ಕೇಳಿದರೆ ಇನ್ನು ಅದಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಾರೆ. ಬಹುಶಃ ಫಲಾನುಭವಿಗಳನ್ನು ಆಯ್ಕೆ ಮಾಡಿದ ಮೇಲೆ ಅಥವಾ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಆದೇಶವನ್ನು ಕೊಟ್ಟು ಅವರು ಕೆಲಸ ಮಾಡಿದ ಮೇಲೆ ಹಣವನ್ನು ಬಿಡುಗಡೆ ಮಾಡಬೇಕೇ ಎನ್ನತಕ್ಕಂತಹ ವಿವರಗಳನ್ನು ನಾನು ಕೇಳುತ್ತಾ ಇದ್ದೇನೆ.

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : 1997-98ಕ್ಕೆ ಗ್ರಾಮೀಣ ಆಶ್ರಯ ಮನೆಗಳ ನಿರ್ಮಾಣಕ್ಕಾಗಿ ದಕ್ಷಿಣ ಕನ್ನಡ ಪಂಚಾಯಿತಿಗೆ ಈಗಾಗಲೇ 113.83 ಲಕ್ಷ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ. ಉಳಿದ ಸಹಾಯಧನ ಹಾಗೂ ಸಾಲವನ್ನು ಈ ವರ್ಷ ಬಿಡುಗಡೆ ಮಾಡಲಾಗುವುದು. ವಸತಿ ಹಂಚಿಕೆಗೆ ಕುಂದಾಪುರ ತಾಲ್ಲೂಕಿನಲ್ಲಿ ಅರ್ಹ ಫಲಾನುಭವಿಗಳನ್ನೂ ಹಂಚಿಕೆಯಿಂದ ಆಯ್ಕೆ ಮಾಡಲಾಗುತ್ತದೆ. ಫಲಾನುಭವಿಗಳಿಗೆ ಸೂಕ್ತ ಆದೇಶವನ್ನು ಕೊಡಲು ಕುಂದಾಪುರ ತಾಲ್ಲೂಕು ಪಂಚಾಯಿತಿಗೆ ಕಾರ್ಯನಿರ್ವಹಣಾಧಿಕಾರಿಯವರು ರಜೆಯಲ್ಲಿ ಇರುವುದರಿಂದ ಬಿಡಿಓರವರಿಗೆ ಈಗಾಗಲೇ ದೂರವಾಣಿ ಮುಖಾಂತರ ಆದೇಶವನ್ನು ಕೊಡಲಾಗಿದೆ.